61

# ಒಂದು ಕುಟುಂಬದ ಪ್ರತಿಕೃತಿ

## (20:6-12)

ಪೌಲನು ತನ್ನ ಮೂರನೇ ಪ್ರಯಾಣ ಅಂತ್ಯಗೊಳಿಸಿ, ಯೆರೂಸಲೇಮಿಗೆ ಹೋಗುವಾಗ, ಅವನು ಮತ್ತು ಅವನ ಸಂಗಡಿಗರು ತ್ರೋವದಲ್ಲಿ ಇಳುಕೊಂಡಾಗ, ಲೂಕನು ಈ ಮಾತುಗಳನ್ನು ಬರೆದನು:

> ಹುಳಿಯಿಲ್ಲದ ರೊಟ್ಟಿಯ ಹಬ್ಬದ ದಿವಸಗಳನ್ನು ಪೂರೈಸಿದ ಮೇಲೆ ನಾವು ಫಿಲಿಪ್ಪಿಯಿಂದ ಹೊರಟು ಹಡಗನ್ನು ಹತ್ತಿ ಐದು ದಿವಸದಲ್ಲಿ ತ್ರೋವದಲ್ಲಿ ಬಂದು ಅವರನ್ನು ಸೇರಿ ದೆವು. ಅಲ್ಲಿ ಏಳು ದಿವಸಗಳಿದ್ದೆವು. ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನವರೆಗೂ ಉಪನ್ಯಾಸವನ್ನು ನಡಿಸಿದನು. ನಾವು ಕೂಡಿದ್ದ ಮೇಲಂತಸ್ತಿನಲ್ಲಿ ಅನೇಕ ದೀಪಗಳಿದ್ದವು. ಯೂತಿಖನೆಂಬ ಒಬ್ಬ ಯೌವನಸ್ಥನು ಕಿಟಕಿಯಲ್ಲಿ ಕೂತುಕೊಂಡು ಗಾಢನಿದ್ರೆಯಿಂದ ತೂಕಡಿಸಿದನು. ಪೌಲನುಇನ್ನೂ ಪ್ರಸಂಗ ಮಾಡುತ್ತಾ ಇದ್ದಾಗ ಆ ಯೌವನಸ್ಥನು ನಿದ್ರೆಯಿಂದ ತೂಕಡಿಕೆ ಹೆಚ್ಚಾಗಿ ಮೂರನೆಯ ಅಂತಸ್ತಿನಿಂದ ಕೆಳಕ್ಕೆ ಬಿದ್ದನು; ಅವನನ್ನು ಎತ್ತಿನೋಡುವಾಗ ಸತ್ತಿದ್ದನು. ಆದರೆ ಪೌಲನು ಇಳಿದುಹೋಗಿ ಅವನ ಮೇಲೆ ಬಿದ್ದು ತಬ್ಬಿಕೊಂಡು - ಗೋಳಾ ಡಬೇಡಿರಿ, ಅವನ ಪ್ರಾಣ ಅವನಲ್ಲಿ ಅದೆ ಎಂದು ಹೇಳಿದನು. ಆಗ ಅವನು ಮೇಲಕ್ಕೆ ಹೋಗಿ ರೊಟ್ಟಿ ಮುರಿದು ಊಟಮಾಡಿ ಬಹಳ ಹೊತ್ತು ಬೆಳಗಾಗುವ ತನಕ ಸಲ್ಲಾಪಮಾಡಿ ಹಾಗೆ ಹೊರಟುಹೋದನು. ಅವರು ಜೀವಿತನಾದ ಆ ಹುಡುಗನನ್ನು ಕರೆದುಕೊಂಡು ಬರಲು ಅವರಿಗೆ ಬಹಳ ಆದರಣೆ ಉಂಟಾಯಿತು (ಅಪೊಸ್ತಲರ ಕೃತ್ಯಗಳು 20:6-12).

ಪೌಲನ ಪ್ರಯಾಣದ ಕೆಲವು ವಿಚಾರಗಳನ್ನು ಲೂಕನು ಮೊಟಕು ಮಾಡಿದ್ದರೂ, ಇತರೆ ಭಾಗಗಳ ವಿಶಿಷ್ಟ ವಿವರಣೆಯನ್ನು ನೀಡಿರುವನು. ನಮ್ಮ ಹಿಂದಿನ ಪಾಠದಲ್ಲಿ, ಅನೇಕ ತಿಂಗಳುಗಳ ಚಟುವಟಿಕೆ ಮತ್ತು ಸಾಹಸದ ಕುರಿತು ವೇಗವಾಗಿ ಮುಂದುವರಿದನು. ಈ ವಾಕ್ಯಭಾಗದಲ್ಲಿ, ಸಭಾಕಟ್ಟಡದಿಂದ ಬಿದ್ದು ಹೋದ ಒಬ್ಬ ಯೌವನಸ್ಥನ ವಿಚಾರವನ್ನು ಲೂಕನು ಕ್ರಮಬದ್ಧವಾಗಿ ವಿವರಿಸಿರುವನು![1]

ಅಪೊಸ್ತಲರ ಕೃತ್ಯದಲ್ಲಿ ಏಕೆ ಈ ದೃಷ್ಟಾಂತವನ್ನು ನೀಡಲಾಗಿದೆ?[2] "ನಿದ್ರೆಯಿಂದ ತೂಕಡಿಸಿದ ಯೌವನಸ್ಥನನ್ನು" ಅವಮಾನ ಪಡಿಸಲು ಈ ಸಂಗತಿಯನ್ನು ತಿಳಿಸಿರುವದಿಲ್ಲ (ವಚನ 9; NIV). ಈ ವಾಕ್ಯದಲ್ಲಿ, ತ್ರೋವದ ಸಭೆಯವರು ಒಟ್ಟಾಗಿ ಸೇರಿ ಬಂದಿರುವ ವಿಚಾರವು ನನಗೆ ಆಶ್ಚರ್ಯವಂಟು ಮಾಡುತ್ತದೆ. ಆ ಆದಿ ಸಭೆಯಲ್ಲಿ ಒಂದು ಕೌಟುಂಬಿಕ ವಾತಾವರಣ ಉಂಟಾಗಿತ್ತು.

### ಕುಟುಂಬವು ಒಟ್ಟಾಗಿ ಸೇರಿ ಬಂದಿತ್ತು (20:6, 7)

ಹುಳಿಯಿಲ್ಲದ ಹಬ್ಬದ ದಿವಸದಲ್ಲಿ ಪೌಲನು ಯೆರೂಸಲೇಮಿನಲ್ಲಿ ತುರ್ತಾಗಿ ಇರಬೇಕೆಂಬದಾಗಿದ್ದರು (ವಚನ 16). ಅವನು ಮತ್ತು ಅವನ ಸಂಗಡಿಗರು ತ್ರೋವದಲ್ಲಿ

“ಏಳು ದಿವಸಗಳ ಕಾಲ ತಂಗಿದ್ದರು” (ವಚನ 6). ಒಂದು ವೇಳೆ ಅದು ಹಡಗಿನ ವೇಳಾ ಪಟ್ಟಿಗೆ ಒಳಪಟ್ಟಿರಬಹುದು. ಅಥವಾ ವಾರದ ಮೊದಲನೆಯ ದಿವಸದಲ್ಲಿ ರೊಟ್ಟಿ ಮುರಿಯುವ ನಿಯಮಕ್ಕಾಗಿ, ಸಹೋದರರೊಂದಿಗೆ ಸೇರುವ ಕಾರಣವೂ ಇರಬಹುದು.[3] ಯಾಕೆಂದರೆ ಫಿಲಿಪ್ಪಿಯಿಂದ ತ್ರೋವಕ್ಕೆ ಯಥಾ ಸಮಯಕ್ಕಿಂತಲೂ, ತುಸು ಹೆಚ್ಚಾದ ಪ್ರಯಾಣವಾಗಿರ ಬಹುದು,[4] ಅಥವಾ ಪೌಲನು ಕರ್ತನ ದಿವಸವನ್ನು ಕಳಕೊಂಡಿರಬಹುದು,[5] ಒಂದು ವೇಳೆ ಅವನು ಸೋಮವಾರದಂದು[6] ಸೇರಿರಬಹುದು. ಆದದರಿಂದ, ಅವನು ಸಹೋದರರ ಅನ್ಯೋನ್ಯತೆಗೆ ಸೇರಲು ಒಂದು ವಾರದ ಕಾಲ ಕಾಯ್ದಿರಬಹುದು.[7]

ಆದರೆ ಪೌಲನು “ಪಟ್ಟಣವನ್ನು ತೊರೆದು” ಬೇರೆಡೆಯಾಗಲೀ ಮತ್ತು ಅವನು ಸ್ಥಾನಿಕ ಸಭೆಯಿಂದ ದೂರವಾಗಿದ್ದನು ಎಂಬುದಾಗಿರವದಿಲ್ಲ. ಇದು ಒಂದು ಕಾರಣವೂ ಆಗಿರಲಿಲ್ಲ. ಅವನು ಒಂದು ಹೊಸ ಪಟ್ಟಣಕ್ಕೆ ಬರುವಾಗ, ತನ್ನ ಸಹೋದರರನ್ನು ಹುಡುಕಿ ಅವರನ್ನು ಸಂಧಿಸುತ್ತಿದ್ದು.[8] ವಾರದ ಮೊದಲನೆಯ ದಿನದಲ್ಲಿ ತನ್ನ ಸಹೋದರರೊಂದಿಗೆ ಇರುತ್ತಿದ್ದನು.

ವಾರದ ಮೊದಲನೆಯ ದಿನದಲ್ಲಿ ಯೇಸು ಮರಣದಿಂದ ಎದ್ದು ತನ್ನ ಶಿಷ್ಯರಿಗೆ ಕಾಣಿಸಿಕೊಂಡ ಕಾರಣದಿಂದ ಅವರು ವಾರದ ಮೊದಲನೆಯ ದಿವಸದಲ್ಲಿ ಸೇರುತ್ತಿದ್ದರು (ಲೂಕ 24:1, 7, 13, 21; ಯೋಹಾನ 20:19, 26).[9] ಜಸ್ಟಿನ್ ಮಾರ್ಟಿರ್‌ರವರು ಬರೆದು “ಭಾನುವಾರದಂದೇ ನಾವುಗಳು ಸಭೆಯಾಗಿ ಸೇರುತ್ತೇವೆ” ಏಕೆಂದರೆ “ನಮ್ಮ ಕರ್ತನಾದಂಥ ಯೇಸು ಕ್ರಿಸ್ತನು ಆ ದಿನದಂದೇ ಎದ್ದು ಬಂದಿರುವನು”[10] ಯೆಹೂದ್ಯರು ಏಳನೆಯ ದಿನದಲ್ಲಿ ಸೇರುತ್ತಿದ್ದರು.[11] ಅದು ಅವರು ದೈಹೀಕ ಸೃಷ್ಟಿಯ ನೆನಪಿನಾರ್ಥ ಸೇರುತ್ತಿದ್ದರು (ವಿಮೋಚನಕಾಂಡ 20:8-11); ಯೇಸುವಿನ ಮರಣ ಹೂಣಿಡುವಿಕೆ, ಹಾಗೂ ಪುನರುತ್ಥಾನದ ಕಾರಣದಿಂದ ಕ್ರೈಸ್ತರು ಮೊದಲ ದಿನದಂದು ನೆನಪು ಮಾಡುವರು (1 ಕೊರಿಂಥ 11:23-25) ಅದು “*ಹೊಸ ಸೃಷ್ಟಿ*” ಯನ್ನು ನೆನಪು ಮಾಡುತ್ತದೆ (ಗಲಾತ್ಯ 6:15; ಒತ್ತಿ ಹೇಳಿದ್ದು ನನ್ನದು).

ದೀಪವು ಉರಿಯುತ್ತಿತ್ತು ಎಂದು ಲೂಕನು ಉಲ್ಲೇಖ ಮಾಡಿರುವದರಿಂದ (ವಚನ 8), ತ್ರೋವದ ಸಭೆಯು ರಾತ್ರಿ ಕಾಲದಲ್ಲಿ ಸೇರಿಬಂದಿರಬಹುದು.[12] ವಾರದ ಮೊದಲನೆಯ ದಿನವು ಆ ಪಟ್ಟಣದ ಕೆಲಸದ ಇನ್ನೊಂದು ದಿವಸವಾಗಿರುವದರಿಂದ, ಮತ್ತು ಅನೇಕ ಕ್ರೈಸ್ತರು ಇತರರಿಗಾಗಿ ಕೆಲಸ ಮಾಡುತ್ತಿದದ್ದರಿಂದ,[13] ಕೆಲಸ ಮುಗಿದ ನಂತರ ಅವರು ಸೇರಿಬರುವ ಸಾಧ್ಯತೆಯಿತು.

ಲೂಕನ ಈ ಹೇಳಿಕೆಯ ಪ್ರಕಾರ ತ್ರೋವದ ಸಭೆಯವರು ಶನಿವಾರ ರಾತ್ರಿ ಸೇರಿರಬಹುದು ಎಂಬ ಶಂಕೆಯನ್ನು ಉಂಟುಮಾಡುತ್ತದೆ,[14] ಆದರೆ ಲೂಕನು ಆ ಮಿಶ್ರ ಪಟ್ಟಣದಲ್ಲಿದ್ದ, ಯೆಹೂದ್ಯರ ಕ್ರಮವನ್ನು ತಿಳಿಸುತ್ತಿರುವದಿಲ್ಲ.[15] ಲೂಕನು ಯೆಹೂದ್ಯರ ಅಥವಾ ರೋಮಾಯರ ಪರಂಪರೆಯಂತೆ ಸೂಚಿಸಿದ್ದರೂ, ತ್ರೋವದ ಕ್ರೈಸ್ತರು ವಾರದ ಮೊದಲನೆಯ ದಿನದ ಸಾಯಂಕಾಲ ಕೂಡಿ ಬಂದಿದ್ದರು.[16]

ಈ ಸಂಗತಿಗಳನ್ನು ಒಟ್ಟುಗೂಡಿಸುವುದಾದರೆ: (1) ಪೌಲನು ಅವರನ್ನು ಸಂಧಿಸಲು ಹೋದನು; (2) ಸಹೋದರರು, ತೊಡಕು ಇದ್ದ ಸ್ಥಳದಲ್ಲಿ ಸೇರುತ್ತಿದ್ದರು; (3) ಅವರು ಕೆಲಸ ಮಾಡಿ ಮುಗಿಸಿದ ನಂತರ ಸೇರಿ ಬಂದಿದ್ದರು. ಕ್ರೈಸ್ತರು ಪರಸ್ಪರ ಸಂಧಿಸಲು ಇಚ್ಛೆಯುಳ್ಳವರಾಗಿದ್ದರು (ಅಪೊಸ್ತಲರ ಕೃತ್ಯಗಳು 2:42). ದೈಹೀಕವಾದ ಕುಟುಂಬಗಳು ಪರಸ್ಪರ ಕೂಡಿಬಂದರೂ, ಅವರಲ್ಲಿ ಒಬ್ಬರು ಕೂಡಿ ಬರುವಲ್ಲಿ ಆನಂದ ಪಡೆದಿದ್ದರೆ ಅದನ್ನು ಕಾರ್ಯ ನಿರ್ವಹಿಸದ ಕುಟುಂಬ ಎಂದು ಕರೆಯುತ್ತೇವೆ. ಆದರೆ ದೇವರ ಮಕ್ಕಳು ಪರಸ್ಪರ ಸೇರುವಲ್ಲಿ ಆನಂದಗೊಳ್ಳುವರು.

ಸ್ವಪರೀಕ್ಷೆ ಮಾಡಿಕೊಳ್ಳಬೇಕು. ಸಭೆಯಲ್ಲಿ ನಿಮ್ಮ ಸಹೋದರ ಹಾಗೂ ಸಹೋದರಿಯ ಅನ್ಯೋನ್ಯತೆಯನ್ನು ಆನಂದಿಸುವಿರಾ? ನೀವು ಕೂಡಿ ಬರುವಾಗ ಆನಂದಗೊಳ್ಳದಿದ್ದರೆ,

ಪರಸ್ಪರ ಹಾಗೂ ತಂದೆಯೊಂದಿಗಿನ ನಿಮ್ಮ ಸಂಬಂಧವನ್ನು ಪರೀಕ್ಷಿಸಿಕೊಳ್ಳ ಬೇಕು (ಇಬ್ರಿಯ 10:25).

## ಕರ್ತನ ಬೋಜನವನ್ನು ಸಭೆಯವರೆಲ್ಲರೂ ಒಟ್ಟಾಗಿ ಸೇವಿಸಿದರು (20:7)

ವಾರದ ಮೊದಲನೆಯ ದಿವಸದಲ್ಲಿ "ರೊಟ್ಟಿ ಮುರಿಯುವದಕ್ಕಾಗಿ" ಸಭೆಯು ಒಟ್ಟಾಗಿ ಸೇರಿ ಬಂದಿತ್ತು (1 ಕೊರಿಂಥ 16:2). ಅವರು ಆರಾಧನೆಗೂ, ರೊಟ್ಟಿ ಮುರಿಯುವ ಅನ್ಯೋನ್ಯತೆಗೂ ಬಂದಿದ್ದರು. ವಚನ 7ರಲ್ಲಿರುವ "ನಾವು ರೊಟ್ಟಿ ಮುರಿಯುವದಕ್ಕಾಗಿ ಕೂಡಿ ಬಂದೆವು" ಎಂಬ ಹೇಳಿಕೆಯನ್ನು ಗಮನಿಸಿ. (ಒತ್ತಿ ಹೇಳಿದ್ದು ನನ್ನದು).[17] ಸಾಮಾನ್ಯ ಊಟಕ್ಕೂ "ರೊಟ್ಟಿ" ಮುರಿಯುವದು ಎಂದು ಹೇಳುವರು (ಅಪೊಸ್ತಲರ ಕೃತ್ಯಗಳು 2:46). ಅಥವಾ ಕರ್ತನ ಭೋಜನದಲ್ಲಿ ಪಾಲುಗಾರರು (ಮತ್ತಾಯ 26:26; ಅಪೊಸ್ತಲರ ಕೃತ್ಯಗಳು 2:42; 1 ಕೊರಿಂಥ 10:16). "ಕರ್ತನ ಭೋಜನದ ಹೇಳಿಕೆಯೇ ಇದು ಎಂದು ವಿದ್ವಾಂಸರು ಹೇಳುವರು. ಈ ಕೂಟದಲ್ಲಿ ರೊಟ್ಟಿ ಮುರಿಯುವರು ಎಂಬದು ಇದೇ ಅರ್ಥವನ್ನು ನೀಡುತ್ತದೆ."[18]

"ಕರ್ತನ ಭೋಜನವನ್ನು ಮಾಡುವದು ಆಶ್ಚರ್ಯವಲ್ಲ" (1 ಕೊರಿಂಥ 11:20) "ಕರ್ತನ ದಿನದಲ್ಲಿ," (ಪ್ರಕಟನೆ 1:10). ಆರಾಧನೆಯ ಪ್ರತಿ ಉಚ್ಚಾರವು ಪ್ರಮುಖ್ಯವೆ. ಕರ್ತನ ಆರಾಧನೆಯಲ್ಲಿ ಕ್ರೈಸ್ತರು ರೊಟ್ಟಿ ಮುರಿಯುವದನ್ನು ತೋರ್ಪಡಿಸುವರು ಧ್ಯಾನಿಸುವದಕ್ಕೂ ಪ್ರಾರ್ಥಿಸುವದಕ್ಕೂ, ಹಾಡುವದಕ್ಕೂ ಹಾಗೂ ಕೊಡುವದಕ್ಕೂ, ಯೆಹೂದ್ಯರು ಸಭೆಯಾಗಿ ಸೇರಿಬರುತ್ತಿದ್ದರು, ಆದರೆ ಕ್ರೈಸ್ತರು ಮಾತ್ರ "ಕರ್ತನ ಮೇಜಿನ ಸುತ್ತಲೂ" ಸೇರಿಬರುವರು (1 ಕೊರಿಂಥ 10:21). ಪ್ರತಿ ಮೊದಲನೆಯ ದಿನವು, ಕ್ರಿಸ್ತನ ಮರಣ, ಸಮಾದಿ ಹಾಗೂ ಪುನರುತ್ಥಾನವನ್ನು ನೆನಪು ಮಾಡಲು ಸೇರಿಬರುವರು.[19]

ಆದಿ ಕ್ರೈಸ್ತರು ಕರ್ತನ ಭೋಜನಕ್ಕಾಗಿ, ವಾರದ ಮೊದಲನೆಯ ದಿನ ಸೇರಿ ಬರುತ್ತಿದ್ದರು. ಈಗ ಓದಿದ ವಾಕ್ಯಭಾಗದಿಂದ ನಾವು ಅದನ್ನು ಗ್ರಹಿಸಬಹುದು: ಕ್ರೈಸ್ತರು, ವಾರದ ಮೊದಲನೆಯ ದಿನದಲ್ಲಿ ಸೇರಿ ಬಂದದ್ದರಿಂದ (1 ಕೊರಿಂಥ 16:1, 2). ಅವರು ರೊಟ್ಟಿಯನ್ನು ಮುರಿಯುತ್ತಿದ್ದರು (ಅಪೊಸ್ತಲರ ಕೃತ್ಯಗಳು 20:7). ಎಂದು ನಾವು ನಿರ್ಣಯಿಸಬಹುದು. ಇದನ್ನು ಆದಿ ಕ್ರೈಸ್ತರ ಬರಹಗಾರರು ಸಾಭೀತು ಪಡಿಸಿರುವರು ಎರಡನೆ ಶತಮಾನದ ಆರಂಭದಲ್ಲಿ, ಈ ಮಾತುಗಳು ಬರೆಯಲ್ಪಟ್ಟಿವೆ: "ಪ್ರತಿ ಕರ್ತನ ದಿನದಲ್ಲಿ ನೀವು ಒಟ್ಟಾಗಿ ಸೇರಿ, ರೊಟ್ಟಿಯನ್ನು ಮುರಿಯಿರಿ, ಮತ್ತು ಕೃತಜ್ಞತೆ ಸಲ್ಲಿಸಿರಿ."[20] ಸುಮಾರು ಕ್ರಿ.ಶ. 150ರಲ್ಲಿ ಜಸ್ಟಿನ್ ಮಾರ್ಟಿನ್‌ರವರು ಬರೆದಿರುವಂತೆ:

> ಪಟ್ಟಣದಲ್ಲಿ ಇರುವ ಅಥವಾ ಹಳ್ಳಿಯಲ್ಲಿರುವ ಕ್ರೈಸ್ತರು, ಕರ್ತನದಿನದಲ್ಲಿ ಸೇರಿ ಬರ ಬೇಕು, ಏಕೆಂದರೆ ಅದು ಆತನ ಪುನರುತ್ಥಾನದ ದಿವಸವಾಗಿದೆ. ಪ್ರಾರ್ಥನೆಯು ಮುಗಿದ ನಂತರ, ರೊಟ್ಟಿ ಮತ್ತು ದ್ರಾಕ್ಷಾರಸ, ಹಾಗೂ ನೀರನ್ನು ತರಲಾಗುವದು, ಕಾರ್ಯದ್ಯಕ್ಷನು, ತನ್ನ ಸಾಮರ್ಥ್ಯಕ್ಕನುಗುಣವಾಗಿ ಪ್ರಾರ್ಥನೆಯನ್ನೂ, ಸ್ತುತಿಯನ್ನೂ ಸಲ್ಲಿಸುವನು, ನಂತರ ಜನರು "ಆಮೇನ್" ಅನ್ನುವರು; ಸೋತ್ರ ಮಾಡಿದ ಪಥಾರ್ಥಗಳನ್ನು ಅಲ್ಲಿ ಸೇರಿರುವವರಿಗೆ ನೀಡಲಾಗುವದು.[21]

ಮೆಕ್‌ಗಾರ್ವೆಯವರು "ಕರ್ತನ ದಿನದಲ್ಲಿ ನಿಶ್ಚಯವಾಗಿ ಸೇರಿಬಂದ ಶಿಷ್ಯರೆಲ್ಲರೂ, ಅವರು ರೊಟ್ಟಿಯನ್ನು ಮುರಿದರು" ಎಂದು ಹೇಳಿ:

> (ಸಾಕ್ಷಾಧಾರ ಅಪೊಸ್ತಲರ ಕೃತ್ಯಗಳು 20:7) ಎರಡನೆ ಶತಮಾನದ ಸಭೆಯ ಸಂಪ್ರದಾಯವನ್ನು ಸಾರ್ವತ್ರಿಕ ಸಭೆಗೆ ತೆಗೆದುಕೊಳ್ಳುವುದಾದರೆ, ನಂತರ ಅನೇಕ

ದಿವಸಗಳಾದ ಮೇಲೆ, ವೇದಕ್ಕನುಗುಣವಾದ ವಿದ್ವಾಂಸರು ಅದನ್ನು ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವರು, ಇದು ಅಪೊಸ್ತಲರ ಸಂಪ್ರದಾಯ ಎಂದು ಸಹ ಒಪ್ಪಿರುವರು.[22]

ಒಬ್ಬನು ಉದ್ದೇಶ ಪೂರ್ವಕವಾಗಿ ಕರ್ತನ ದಿನವನ್ನು ತಪ್ಪಿಸಿಕೊಂಡರೆ, ಅವನು ಉದ್ದೇಶಪೂರ್ವಕವಾಗಿಯೇ ಕರ್ತನ ಮೇಜನ್ನು ಕಳಕೊಂಡವನಾಗಿರುತ್ತಾನೆ. ಇಬ್ರಿಯ ಬರಹಗಾರನು ತಿಳಿಸಿರುವಂತೆ, "ಅವನು ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರ ಪಡಿಸಿದಂಥ ತನ್ನನ್ನು ಪವಿತ್ರ ಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೆ" (ಇಬ್ರಿಯ 10:29). ಸಭೆಯ ಆರಂಭದ ದಿವಸಗಳನ್ನು ಸಭೆಯು ಆನಂದವಾಗಿ ಕರ್ತನ ಭೋಜನದಲ್ಲಿ ಪಾಲುಗಾರರಾಗುತ್ತಿದ್ದರು.

## ಕುಟುಂಬವು ಅವರ ತಂದೆಯ ವಾಕ್ಯವನ್ನು ಧ್ಯಾನಿಸುವದರಲ್ಲಿ ಆನಂದಗೊಂಡಿದ್ದರು (20:7)

"ರೊಟ್ಟಿ ಮುರಿಯುವ ಕಾರ್ಯಕ್ಕಾಗಿ" ಸಭೆಯು ಸೇರಿ ಬರುವಾಗ, ದೇವರ ವಾಕ್ಯವನ್ನು ಕಲಿಯುವುದು ಅವರ ಆರಾಧನೆಯ ಮುಖ್ಯ ಧ್ಯೇಯವಾಗಿತ್ತು (ಕೊಲೊಸ್ಸೆ 4:16; 1 ತಿಮೊಥೆ 4:13). ಒಬ್ಬನು ಏನನ್ನಾದರೂ ಹೇಳಬೇಕೆಂದಿದ್ದರೆ, ಅಲ್ಲಿ ಪ್ರಸಂಗವೂ ಇರುತ್ತಿತ್ತು (1 ತಿಮೊಥೆ 4:13; 2 ತಿಮೊಥೆ 4:1, 2). ತ್ರೋವದವರು ರೊಟ್ಟಿ ಮುರಿಯಲು ಸೇರಿಬರುವಾಗ, ಪೌಲನು ಪ್ರಸಂಗ ಮಾಡಿದನು ಎಂದು ಲೂಕನು ತಿಳಿಸಿರುವನು (ಅಪೊಸ್ತಲರ ಕೃತ್ಯಗಳು 20:7ಬಿ). ಗ್ರೀಕ್‌ನ "ಮಾತಾಡು" ಎಂಬುದನ್ನು ಈಗಿನ "ಸಂಭಾಷಣೆ" ಎನ್ನುತ್ತೇವೆ. "ಪೌಲನು ಅವರೊಂದಿಗೆ ತರ್ಕಮಾಡಿದನು" ಎಂದು ಇನ್ನೊಂದು ಅನುವಾದವಿದೆ.[23] ತರುವಾಯ ಅವನು ಎಫೆಸದವರಿಗೆ ನೀಡಿರುವಂಥ ಮಾತುಗಳನ್ನು ಇಲ್ಲಿಯೂ ಸಹ ಹೇಳಿರಬಹುದು (ವಚನಗಳು 17-35).

"ಪೌಲನು ಸರಿಹೊತ್ತಿನವರೆಗೂ ಉಪನ್ಯಾಸ ನೀಡಿದನು" ಎಂಬುದನ್ನು ಪ್ರಸಂಗಿಗಳು ಒತ್ತಿ ಹೇಳಲು ಇಚ್ಛೆಪಡುತ್ತಾರೆ (ವಚನ 7ಸಿ). ಈ ಕ್ರೈಸ್ತರೊಂದಿಗೆ ಮಾತನಾಡಲು ಪೌಲನು ಅವನ ಹೃದಯದಲ್ಲಿ ಅನೇಕ ವಿಚಾರಗಳನ್ನು ಹೊಂದಿದ್ದನು. ಆದ್ದರಿಂದ ಸಹೋದರರು ಅದನ್ನು ಮುಂದುವರಿಸಲು ಅನುವು ಮಾಡಿದರು. ಪೌಲನ ಮಾತನ್ನು ಈ ರೀತಿ ಊಹಿಸುತ್ತೇನೆ: "ಇಷ್ಟಕ್ಕೆ ಸಾಕು; ಈಗ ತಡವಾಗಿದೆ, ಹಾಗೂ ನೀವುಗಳು ಆಯಾಸಗೊಂಡಿರುವಿರಿ." ಆದರೆ ಅವನ ಕೇಳುಗರು, ಪ್ರತಿಕ್ರಿಯೆ ನೀಡಿ, ನಾವು ಆಯಾಸಗೊಂಡಿರುವದಿಲ್ಲ ಸಹೋದರನೇ ಪ್ರಸಂಗವನ್ನು ಮುಂದುವರಿಸು ಎಂದು ಹೇಳಿರಬಹುದು! ತ್ರೋವದವರಿಗೆ ದೊರಕಿದ ಈ ಅವಕಾಶವನ್ನು ಗಡಿಯಾರದ ಸಮಯಕ್ಕೆ ಸೀಮಿತಗೊಳಿಸಲಿಲ್ಲ. ಒಬ್ಬನು ಹೇಳಿರುವಂತೆ, "ಅವರನ್ನು ಸಭೆಗೆ ಕರೆಯುವ ಬದಲು, ಅವರನ್ನು ಸಭೆಯಿಂದ ಕಳುಹಿಸುವದು ಸಮಸ್ಯೆಯಾಗಿತ್ತು!"

ಅಮೇರಿಕದ, ಅನೇಕರಾದ ನಾವು ದೂರದರ್ಶನದ ಸಮಯವನ್ನು ಅತಿ ಕಡಿಮೆಯಾಗಿ ಹೊಂದಿರುವದರಿಂದ, ಕೆಲವು ಕ್ಷಣಗಳ ಕಾಲ ಮಾತ್ರ ಮಾತನಾಡಬಹದು. ಆದ್ದರಿಂದ ಸತ್ಯವೇದವನ್ನು ಬೋಧಿಸಲ್ಪಡುವಾಗ, ಅದರ ಸದುಪಯೋಗವನ್ನು ಮಾಡಿಕೊಳ್ಳಬೇಕು! ಆದಿ ಸಭೆಯವರು ವಾಕ್ಯದ ಅಧ್ಯಯನವನ್ನು ಪ್ರೀತಿಸಿದರು.

## ಸಾಧ್ಯವಾದ ಸಕಲ ಸ್ಥಳಗಳಲ್ಲಿ ಆ ಕುಟುಂಬವು ಸೇರಿ ಬರುತ್ತಿತ್ತು (20:8, 9)

ಅನೇಕ ವರ್ಷಗಳಿಂದ, ನಾನು ಕುಟುಂಬದ ಕೂಟಗಳಿಗಾಗಿ ಮನೆಗಳಲ್ಲಿ, ಬಾಡಿಗೆ

ಕೊಠಡಿಗಳಲ್ಲಿ ಉದ್ಯಾನವನಗಳಲ್ಲಿ, ಸಂದರ್ಶನವನ್ನು ನೀಡಿರುವೆನು. ಕುಟುಂಬಗಳು ಎಲ್ಲಿ ಸೇರಿಬರುತ್ತವೆಯೋ ಆ ಸ್ಥಳಗಳು ಪ್ರಮುಖವಲ್ಲ ಆದಿ ಕ್ರೈಸ್ತರು ಕೊಡುವ ಸ್ಥಳವನ್ನು ಪ್ರಮುಖ ವೆಂದು ಪರಿಗಣಿಸಲಿಲ್ಲ. ಕೆಲವು ಸಾರಿ ಅವರು ಮನೆಗಳಲ್ಲಿ ಸೇರಿ ಬರುತ್ತಿದ್ದರು (ಫಿಲೆಮೋನ 1, 2); ಕೆಲವು ಸಾರಿ ಅವರು ಸಾರ್ವಜನಿಕ ಸ್ಥಳಗಳಲ್ಲಿ ಸೇರಿ ಬರುತ್ತಿದ್ದರು (ಅಪೊಸ್ತರ ಕೃತ್ಯಗಳು 2:46; 5:12). ಅವರು ತ್ರೋವದಲ್ಲಿ ಮೂರನೇ ಅಂತಸ್ತಿನಲ್ಲಿ ಸೇರಿ ಬಂದಿದ್ದರು (20:8, 9) ವೈಯಕ್ತಿಕ ವಾಸಸ್ಥಳಗಳು ಮೇಲಂತಸ್ತನ್ನು ಹೊಂದಿದ್ದರಿಂದ, ಅದು ಒಂದು ಮನೆಗಳ ಸಂಕೀರ್ಣವಾಗಿತ್ತು, ರೋಮಾಪುರ[24] ಹಾಗೂ ಅದರ ಸುತ್ತಲ ಪ್ರದೇಶಗಳಲ್ಲಿ ಈ ಶೈಲಿಯಲ್ಲಿಯೇ ಮನೆಗಳನ್ನು ಕಟ್ಟುತ್ತಿದ್ದರು.

ಈ ಕ್ರೈಸ್ತರು ಮೂರನೇ ಅಂತಸ್ಥಿನಲ್ಲಿಯೇ ಏಕೆ ಸಭೆ ಸೇರಿದ್ದರು? ಒಂದು ಅದರ ಬಾಡಿಗೆ ಕಡಿಮೆ ಇರಬಹುದು. ಅಥವಾ ಜನ ಜಂಗುಳಿಯಿಂದ ದೂರವಿರುವ ಪ್ರಶಾಂತ ಸ್ಥಳವಾಗಿರಬಹುದು. ಅಥವಾ ಅವರಿಗೆ ಆಸ್ಥಳದ ಹೊರತಾಗಿ ಬೇರೆ ಸ್ಥಳಾ ವಕಾಶವಿರದೆ ಇರಬಹುದು. ಕಾರಣಗಳೇನೇ ಇರಲಿ, ಆದರೆ ಅದು ನಿರ್ಧಿಷ್ಟವಾದ ಸೇರಿ ಬರೋಣದ ಸ್ಥಳವಾಗಿರಲಿಲ್ಲ. ಕೆಲಸದಿಂದ ದಣಿದು ಬಂದ ಜನರು ಆರಾಧನೆಗಾಗಿ ಮೂರು ಅಂತಸ್ತಿನ ಮೆಟ್ಟಿಲುಗಳನ್ನು ಹತ್ತಿ ಹೋಗಬೇಕಿತ್ತು (ಮತ್ತು ಅಪೊಸ್ತಲರ ಕೃತ್ಯಗಳು 20ರ ಸಂದರ್ಭದ ಅವರು ಮೇಲೆ ಕೆಳಗೆ ಅನೇಕ ಬಾರಿ ಓಡಾಡಿದ್ದರು) ಅದು ಅವರಿಗೆ ಬೇಸರವಾಗಿರಲಿಲ್ಲ. ಅವರು ಸೇರುವ ಉದ್ದೇಶವು, ಸೇರಿದ ಸ್ಥಳಕ್ಕಿಂತಲೂ ಪ್ರಮುಖ ವಾಗಿತ್ತು.

ಸ್ವಂತ ಸ್ಥಳವನ್ನು ಹೊಂದಿರುವ ಸಭೆಗಳಿಗೆ, ಅದರಿಂದ ಲಾಭ ಇರಬಹುದು: ವಾರದಿಂದ ವಾರಕ್ಕೆ ಸೇರುವ ನಿರ್ದಿಷ್ಟವಾದ ಸ್ಥಳವನ್ನು ಅರಿತಿರುತ್ತಾರೆ; ಸಭೆಗಳ ಕೊರತೆಗಳಿಗನುಸಾರವಾಗಿ ಆ ಕಟ್ಟಡವನ್ನು ಮಾರ್ಪಡಿಸಿಕೊಳ್ಳಬಹುದು; ಅಧಿಕೃತವಲ್ಲದ ಸದಸ್ಯರುಗಳಿಗೆ ಸಭೆಯು ದೃಢವಾಗಿಯೂ ಸ್ಥಿರವಾಗಿಯೂ ಇದೆ ಎಂಬ ಅನುಭವವಾಗುತ್ತದೆ. ಸಭೆಗಾಗಿ ಸ್ವಂತ ಕಟ್ಟಡವನ್ನು ಹೊಂದಿರುವದರಲ್ಲಿ ಕೆಲವು ಸಮಸ್ಯೆಗಳಿವೆ: ಅದಕ್ಕೆ ತಗಲುವ ವೆಚ್ಚದಿಂದ ಸಭಿಕರು ತಮ್ಮ ಒಳ್ಳೆಯ ಕಾರ್ಯಗಳನ್ನು ಕಳಕೊಳ್ಳಬಹುದು; ಅವರು "ನಾಶವಾ ಗುವವರ ಕುರಿತು ಚಿಂತಿಸದೆ," ಕಟ್ಟಡದ ಬಗ್ಗೆಯೇ ಚಿಂತಿಸುವದು ಪ್ರಮುಖವಾಗಬಹುದು. ಕಟ್ಟಡದ ದೆಸೆಯಿಂದ, ಸಭೆಯು ಸ್ವಾರ್ಥ ಚಿಂತಕರಾಗಿದ್ದು, ಅದರ ಕುರಿತಾಗಿಯೇ ಚಿಂತಿಸುವವರಾಗಬಹುದು.

ನಿಮ್ಮ ಸಭೆಯು ಸ್ವಂತ ಕಟ್ಟಡವನ್ನು ಹೊಂದಿರಬಹುದು ಅಥವಾ ಹೊಂದದೇ ಇರಬಹುದು,[25] ಅವರು ಸೇರಿ ಬರುವಾಗ, ಅವರುಗಳು ಮಾಡುವ ಕ್ರಿಯೆಯೇ ಪ್ರಮುಖವಾಗಿದ್ದು, ಸೇರಿ ಬರುವ ಸ್ಥಳವು ಪ್ರಮುಖವಲ್ಲ ಎಂದು ಬೋಧಿಸಬೇಕು - ಮತ್ತು ಅವರು ಅಲ್ಲಿಂದ ಹಿಂದಿರುಗಿ ಹೇಗೆ ಜೀವಿಸುವರೆಂಬದು ಪ್ರಮುಖವಾಗಿರುತ್ತದೆ.

## ಕುಟುಂಬ ವರ್ಗದವರು ಪರಸ್ಪರ ಚಿಂತಕರಾಗಿದ್ದರು (20:9-12)

ಆ ಮೂರಂತಸ್ತಿನ ತ್ರೋವದ ಕಟ್ಟಡದಲ್ಲಿ ಪೌಲನು ಪ್ರಸಂಗಿಸುತ್ತಿರುವಾಗ "ಯೂತಿಕನೆಂಬ ಯೌವನಸ್ತನು ಕಿಟಕಿಯಲ್ಲಿ ಕೂತುಕೊಂಡು ಗಾಢನಿದ್ರೆಯಿಂದ ತೂಕಡಿಸಿದನು ನಂತರ ತೂಕಡಿಕೆ ಹೆಚ್ಚಾಗಿ ಮೂರನೆಯ ಅಂತಸ್ತಿನಿಂದ ಕೆಳಕ್ಕೆ ಬಿದ್ದನು" (ವಚನ 9). ಆಗ ಸಭೆಯು ಅರ್ಧಕ್ಕೆ ನಿಂತು, ಜನರೆಲ್ಲರು ಲಗುಬಗೆಯಿಂದ ಮೆಟ್ಟಿಲುಗಳನ್ನು ಇಳಿದು ಹೋದರು. ಯೌವನಸ್ಥ ಮಗ ಅಥವಾ ಮಗಳನ್ನು ಕಳಕೊಂಡಿರುವ ತಂದೆ ತಾಯಿಗಳು ಆ ಮೃತ ದೇಹವನ್ನು ನೋಡುವಾಗ, ಅವರಿಗೆ ಆ ವೇದನೆಯ ಅರಿವು ಉಂಟಾಗುತ್ತದೆ. ಅವರು "ಗೋಳಾಡಿದರು" ಎಂದು ಲೂಕನು ಉಲ್ಲೇಖಿಸಿರುವನು (ವಚನ 10).

ಅವರ ಗೋಳಾಟದ ಮನೋಸ್ಥಿತಿಗೆ, ವಚನ 12 ಆಧರಣೆ ಉಂಟಾಯಿತು ಎಂದು ತಿಳಿಸುತ್ತದೆ. "ಅವರು ಜೀವಿತನಾದ ಆ ಹುಡುಗನನ್ನು ಕರೆದುಕೊಂಡು ಬರಲು ಅವರಿಗೆ

ಬಹಳ ಆದರಣೆ ಉಂಟಾಗಿತು" ಅವರು ಆ ಹುಡುಗನ ಹೊಣೆ ಹೊಂದಿದ್ದರು - ಅವನ ಪ್ರಯಾಣ ಮತ್ತು ಸುರಕ್ಷೆಯ ಬಗ್ಗೆ ಅವರು ಜವಾಬ್ದಾರಿ ಹೊಂದಿದ್ದರು. NIVಯಲ್ಲಿ "ಜನರು ಯೌವನಸ್ಥನನ್ನು ಜೀವದಿಂದ ಮನೆಗೆ ಕರಕೊಂಡು ಹೋದ, ನಂತರ *ಅವರಿಗೆ* ಮಹಾ ಸಾಂತ್ವನ ಉಂಟಾಯಿತು" (ಒತ್ತಿ ಹೇಳಿದ್ದು ನನ್ನದು). ಅವನ ತಂದೆ ತಾಯಿಗಳು ಕ್ರೆಸ್ತರಾಗದೆ ಇದ್ದದ್ದರಿಂದ, ಜನರು ಅವನನ್ನು ಸುರಕ್ಷಿತವಾಗಿ ಕರೆತರುವೆವು ಎಂದು ಹೇಳಿದ್ದರು. ಅವರು ಅವನ ಮುರಿದ ದೇಹವನ್ನು ನೋಡುತ್ತಿದ್ದ ಸ್ಥಾನದಲ್ಲಿ ನೀವೇ ಇರುವಿರೆಂದು ಭಾವಿಸಿರಿ. ಆ ವಿಷಯವನ್ನು ಅವರ ತಂದೆತಾಯಿಗಳಿಗೆ ಹೇಗೆ ತಿಳಿಸಬೇಕೆಂದು ಆಲೋಚಿಸುವದಿಲ್ಲವೇ. ಪೌಲನು ಅವನಿಗೆ ಪುನರ್ಜಿವ ನೀಡಿದಾಗ, ಅವರ ಹೃದಯಗಳಿಗೆ ಅತ್ಯಾನಂದವಾಗ ಅಲ್ಲವೇ! "ಅವರಿಗೆ ಬಹಳ ಆಧರಣೆ ಉಂಟಾಯಿತು" ಎಂಬುದು ಕ್ಲಿಷ್ಟಕರವಾದ ಲೂಕನ ಹೇಳಿಕೆಯಾಗಿದೆ.

ಅದ್ಭುತದ ಕುರಿತು, ನಮ್ಮ ಮುಂದಿನ ಪಾಠದಲ್ಲಿ ತಿಳಿಯೋಣ. ಈ ಕ್ಷಣದಲ್ಲಿ ಕುಟುಂಬ ವರ್ಗದವರು ಪರಸ್ಪರ ಚಿಂತಕರಾಗಿದ್ದರು ಎಂಬುದನ್ನು ನಾನು ಒತ್ತಿ ಹೇಳು ತ್ತೇನೆ. ಅವರು "ಸಂತೋಷಿಸುವವರ ಸಂಗಡ ಸಂತೋಷಿಸುವರು, ಅಳುವವರ ಸಂಗಡ ಅಳುವರು" (ರೋಮಾಪುರ 12:15). ನೀವು ನಿಮ್ಮ ಸಹೋದರ ಹಾಗೂ ಸೋದರಿಯರ ಕುರಿತು ಚಿಂತಕರಾಗದಿದ್ದಲ್ಲಿ ಪರಿಶೀಲನೆ ಮಾಡಿಕೊಳ್ಳಿರಿ, ನಿಮ್ಮ ತಂದೆಯೇ, ಅವರಿಗೂ ತಂದೆಯಾಗಿದ್ದಾನೆ!

## ಕುಟುಂಬ ವರ್ಗದವರು ಪರಸ್ಪರ ಸಂಧಿಸುತ್ತಾ ಹಾಗೂ ಊಟ ಮಾಡುತ್ತಾ ಆನಂದ ಪಡುತ್ತಿದ್ದರು (20:11)

ಯೂತಿಕನು ಪುನಃ ಜೀವಿತನಾದಾಗ, ಪೌಲ ಮತ್ತು ಇತರರು ಪುನಃ ಮೂರನೆ ಅಂತಸ್ತಿಗೆ ಹಿಂದಿರುಗಿದರು. ವಚನ 11ರಲ್ಲಿ "ಆಗ ಅವನು ಮೇಲಕ್ಕೆ ಹೋಗಿ ರೊಟ್ಟಿ ಮುರಿದು ಊಟಮಾಡಿ ಬಹಳ ಹೊತ್ತು ಬೆಳಗಾಗುವ ತನಕ ಸಲ್ಲಾಪಮಾಡಿ ಹಾಗೆ ಹೊರಟು ಹೋದನು." ವಚನ 7ರಲ್ಲಿ ರೊಟ್ಟಿ ಮುರಿಯುವಿಕೆಯೇ ಆಗಿರಬಹುದು. ಆದರೆ ಅದನ್ನು ನಿಷ್ಕರ್ಷೆ ಮಾಡಲಾಗುವದಿಲ್ಲ. ತ್ರೋವದ ಕ್ರೈಸ್ತರು "ರೊಟ್ಟಿ ಮುರಿಯುವ ನಿಯಮಕ್ಕೆ" ಬಂದದ್ದರಿಂದ, ಪೌಲನು ಮಾತಿನಲ್ಲಿ ಮುಂದುವರಿಯುವಾಗ, ಅವರೆಲ್ಲರೂ ಹುಳಿಯಿಲ್ಲದ ರೊಟ್ಟಿಯನ್ನು ಮತ್ತು ದ್ರಾಕ್ಷಾರಸವನ್ನು ತೆಗೆದು ಕೊಳ್ಳಲುಕಾತರರಾಗಿದ್ದರು. ನಿಶ್ಚಯವಾಗಿಯೂ ಕರ್ತನ ಯಜ್ಞವನ್ನು ನೆನಪು ಮಾಡಲು, ಕರ್ತನ ಮೇಜಿನ ಬಳಿಗೆ ಬಂದಿದ್ದರು. ಅನಂತರ ಅವರು ಪೌಲನ ಮಾತುಗಳನ್ನು ಕೇ ಳಲು ತವಕಗೊಂಡಿದ್ದರು. ವಚನ 11ರಲ್ಲಿ ರೊಟ್ಟಿ ಮುರಿಯುವಿಕೆ, ಅನೇಕ ಘಂಟೆಗಳ ನಂತರ ಜರುಗಿದ್ದರಿಂದ, ಬಹುಶಃ ಅದು ಅನ್ಯೋನ್ಯ ಭೋಜನವಾಗಿರಬಹುದು. ಈ ವಾಕ್ಯಭಾಗವು ಅಪೊಸ್ತಲರ ಕೃತ್ಯಗಳು, 2 ರಂತಿದೆ, ಅಲ್ಲಿ ಕರ್ತನ ಭೋಜನದ ವಚನ 42ರ ಉಲ್ಲೇಖವಿದೆ, (ವಚನ 46) ಅನ್ಯೋನ್ಯತೆಯ ಭೋಜನದ ಕುರಿತಾಗಿರುತ್ತದೆ.[26]

ನಮ್ಮ ಅಪೊಸ್ತಲರ ಕೃತ್ಯಗಳ ಪಾಠದಲ್ಲಿ ನೋಡುವಂತೆ, ಮೇಜಿನ ಭೋಜನದ ಅನ್ಯೋನ್ಯತೆಯು ಆದಿ ಸಭೆಗೆ ಪ್ರಮುಖವಾಗಿದೆ. ಈಗ ಪೌಲ ಮತ್ತು ಅವನ ಸಂಗಡಿಗರು ಆಯಾಸಗೊಂಡವರಾಗಿ, ಮೇಲಂತಸ್ಥಿಗೆ ಹೋದರು. ಅಲ್ಲಿ ಜರುಗಿದ ಘಟನೆಯ ಬಗ್ಗೆ ಅವರ ಮಾತುಗಳು ಅನಾಯಸವಾಗಿದ್ದವು. ಯೂತಿಕನು ನಿದ್ರೆ ಹತ್ತಿ ಬಿದ್ದದ್ದರಿಂದ ಯಾರೂ ಅವನನ್ನು ಟೀಕೆ ಮಾಡಲಿಲ್ಲವೆಂದು ನಾನು ನೆನಸುತ್ತೇನೆ. ಅಲ್ಲಿ ಅವರೆಲ್ಲರು ತಮ್ಮೊಂದಿಗೆ ತಂದಿದ್ದ ಆಹಾರವನ್ನು ಬಹಿರಂಗವಾಗಿ ಇಟ್ಟಿದ್ದರು. ಆಹಾರಕ್ಕಾಗಿ ಸ್ತೊತ್ರ ಮಾಡಿದ ನಂತರ, ಮತ್ತು ಯೂತಿಕನ ಸುರಕ್ಷೆಗಾಗಿ ಕೃತಜ್ಞತೆಯನ್ನೂ ಹೇಳಿದ ನಂತರ, ಅವರು ಒಟ್ಟಾಗಿ ಕೂತು ಊಟಮಾಡಿದರು. ಅಲ್ಲಿ ಯೆಹೂದ್ಯರು ಹಾಗೂ ಅನ್ಯರು, ಯಜಮಾನ ಮತ್ತು ಗುಲಾಮರು, ಸ್ತ್ರೀ ಪುರುಷರು, ಒಂದೇ ಮೇಜಿನ ಸುತ್ತಲೂ ಸೇರಿ ಊಟ ಮಾಡಿದ ಚಿತ್ರಣವು ಅಮೋಘ

ವಾದದ್ದೇ - ಅವರು "ಕ್ರಿಸ್ತನಲ್ಲಿ ಒಂದಾಗಿದ್ದರು" (ಗಲಾತ್ಯ 3:28).

ಅವರ ಈ ಊಟದ ಸಮಯದಲ್ಲಿ ಪೌಲನು "ಬೆಳಗಾಗುವ ತನಕ ಸಲ್ಲಾಪ ಮಾಡಿದನು" (ವಚನ 11). ಗ್ರೀಕ್ ಭಾಷೆಯಲ್ಲಿ ಮಾತನಾಡಿದನು ವಚನ 7ರಲ್ಲಿ ಸಲ್ಲಾಪಕ್ಕೂ - ಮಾತಿಗೂ ವ್ಯತ್ಯಾಸದ ಅನುವಾದವನ್ನು ನೋಡುತ್ತೇವೆ. ಇದು ವಿಶ್ರಾಂತಿ ಸಮಯದ ಮಾತಾಗಿದೆ. ವಚನ 11ರ ಕಡೆಯ ಭಾಗವನ್ನು ಬ್ರೂಸ್‌ರವರು, ಮುಂಜಾನೆಯವರೆಗೂ ಸಂಭಾಷಣೆಯಲ್ಲಿ ತಲ್ಲೀನ ನಾಗಿದ್ದನು ಎಂದು ಅನುವಾ ದಿಸಿದ್ದಾರೆ.[27] ನಾವಿರುವಂಥ ಸ್ಥಳದಲ್ಲಿ "ಪೌಲನು ಅವರನ್ನು ತೊರೆಯುವವರೆಗೆ ಒಳ್ಳೆಯ ಸಂದರ್ಶನವನ್ನು ಅವರೊಂದಿಗೆ ಆನಂದಿಸಿದನು ಎಂದು ಹೇಳು ವೆವು."[28]

ತ್ರೋವದ ಈ ರಾತ್ರಿಯ ಅನುಭವವನ್ನು ನಾನು ಸಂದರ್ಶಿಸಿದ ಅನೇಕ ಅನ್ಯೋನ್ಯತೆ ಗಳಲ್ಲಿ ಅನುಭವಿಸಿರುವೆನು. ಅವುಗಳು ಅನ್ಯೋನ್ಯ ಭೋಜನದಿಂದ ಅಂತ್ಯಗೊಂಡಿದ್ದವು. ಇಂತಹ ಭೋಜನಗಳನ್ನು ಹೊಸ ಒಡಂಬಡಿಕೆಯು "ಪ್ರೀತಿಯ ಬೋಜನ" ಎಂದು ಕರೆ ಯುತ್ತದೆ (ಯೂದ 12).[29] ಅದನ್ನು ನಾವು ಇನ್ನೂ ಸನ್ನಿಹಿತವಾಗಿ ಕರೆಯುತ್ತೇವೆ: "ಸಭೆಯ ಪೂರ್ಣ ಅನ್ಯೋನ್ಯತೆ"; ಪಾಟ್ ಲುಕ್ ಮಿಲ್ "ನೆಲದ ಮೇಲಿನ ಭೋಜನ" (ನನ್ನ ಸ್ನೇಹಿತರು ಈಟಿನ್ ಮತ್ತು ಮೀಟಿನ್ ಎಂದು ಕರೆಯುವರು). ಹೇಗಾದರೂ ಕರೆಯಲಿ, ನಾವು ಈ ಭೋಜನದಲ್ಲಿ ಪರಸ್ಪರ ಅರಿಯುತ್ತೇವೆ, ಸಂಬಂಧವು ಭಲಗೊಳ್ಳುತ್ತದೆ.

ಕುಟುಂಬ ವರ್ಗದವರು ಒಂದಾಗಿ ಬರುವದರಲ್ಲಿ ಆನಂದಿಸುವರು, ಒಂದಾಗಿ ಊಟ ಮಾಡುವದು, ಪರಸ್ಪರ ಸ್ಪಂದನವಾಗುತ್ತದೆ. ಆದಿ ಕ್ರೈಸ್ತರು ಸಹ ಒಂದಾಗಿ ಊಟ ಮಾಡಿ ಒಂದಾಗಿ ಮಾತನಾಡಿದರು, ನಾವು ಸಹ ಹಾಗೆಯೇ ಮಾಡಬೇಕು.

## ಮುಕ್ತಾಯ

ನಮ್ಮ ಪಾಠವನ್ನು ಅಂತ್ಯಗೊಳಿಸುವಾಗ, ಆದಿ ಸಭೆಯ ಕುಟುಂಬದ ವಾ ತಾವರಣವನ್ನು ರುಚಿ ನೋಡೋಣ. ನಾವು ಹೊಸ ಒಡಂಬಡಿಕೆ ಸಭೆಯ ಮೂಲ ವಿಷಯಗಳನ್ನು ಪರಿಗ್ರಹಿಸಿಕೊಂಡಿರುವೆವು ಎಂದು ನಾನು ನಂಬುತ್ತೇನೆ: ಅದರ ಸಂಘಟನೆ, ಅದರ ಆರಾ ಧನೆಯ ಚಿಹ್ನೆ ಇನ್ನು ಮುಂತಾದವು. ನಾವು ಆ ಸಭೆಗಳಂತೆ ಕಷ್ಟಪಟ್ಟು, ಅವರ ಸದ್ಗುಣಗಳನ್ನು ಹೊಂದಿಕೊಳ್ಳಬೇಕು, ಆ ಕ್ರೈಸ್ತರ ಮನೋಭಾವವನ್ನು ಹೊಂದಿಕೊಳ್ಳಬೇಕು. ಪೌಲನು ಸಭೆಯ ಕುರಿತು, "ಅದು ದೇವರ *ಮನೆ*" ಎಂದು ಹೇಳಿರುವನು (1 ತಿಮೊಥೆ 3:15). ನಾವು ಅವರಂತೆ ವರ್ತಿಸಲು ದೇವರು ನಮಗೆ ಸಹಾಯಿಸಲಿ!

## ಪ್ರಸಂಗದ ಟಿಪ್ಪಣಿ

*ಬೈಬಲ್ ಎಕ್ಸ್‌ಪೂಸಿಷನ ಕಾಮೆಂಟರಿ ವಾಲ್* ಅದನ್ನು ವಿವಿಧ ಅಂಶವನ್ನಾಗಿ ವಿಂಗಡಿಸಲಾಗಿದೆ: (1) ಕರ್ತನ ದಿನ, (2) ಕರ್ತನ ಜನರು, (3) ಕರ್ತನ ಭೋಜನ, (4) ಕರ್ತನ ಸಂದೇಶ, (5) ಕರ್ತನ ಶಕ್ತಿ.

---

ಟಿಪ್ಪಣಿಗಳು

[1]"ಆರಾಧನೆಯ ಸಭೆಗೆ" ಸಭೆ ಅಥವಾ ಚರ್ಚ್ ಎನ್ನಲಾಗಿದೆ. ಸಭೆಯ ಕುರಿತು *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕವನ್ನು ನೋಡಿರಿ. [2]ಜಾನ್ ವಡ್ಡಿಯವರ "ಯೊತಿಕಸ್ ಸ್ಲೀಪಿ ಡಿಸೈಪಲ್" ಎಂಬ ಬರವಣಿಗೆಲ್ಲಿ ನನ್ನ ಪಾಠವು ಆಧಾರಗೊಂಡಿದೆ. [3]ಲೀವೀಸ್ ಫೋಸ್ಟರ್ ಪೌಲನು ತನ್ನ

ಸಹೋದರರೊಂದಿಗಿರಲು, ಏಳು ದಿನಗಳ ಕಾಲ ಪಟ್ಟಣದಲ್ಲಿದ್ದನು (21:4; 28:14). [4]"ಬಡವರನ್ನು ನೆನಪು ಮಾಡಿರಿ" ಪಾಠ 6ರ ಟಿಪ್ಪಣಿ ನೋಡಿರಿ. [5]ಪೌಲ, ಲೂಕ ಅಥವಾ ಇತರೆ ಯಾರೇ ಇರಬಹುದು, ವಾರದ ಮೊದಲನೆಯ ದಿನ ಅವರೆಲ್ಲರೂ ಹಡಗಿನಲ್ಲಿ ಸೇರಿಬರುತ್ತಿದ್ದರು. [6]ಅದನ್ನು ಪೂರ್ಣ ದಿನ ಎಂದು ಪರಿಗಣಿಸಿದ್ದರು. [7]ಪೌಲ ಮತ್ತು ಇತರರು ಸುಮ್ಮನೆ ಕೂತರು ಎಂದು ಭವಿಸಬಾರದು ಅವನೊಂದಿಗೆ 9 ಜನರಿದ್ದರು, ಅವರೆಲ್ಲರೂ ಪ್ರಸಂಗಿಗಳೇ ಫಲಪ್ರದವಾಗಿತ್ತು. [8]*ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದ 9:26ರ ಟಿಪ್ಪಣೆಯನ್ನು ನೋಡಿರಿ. [9]ವಾರದ ಮೊಲನೆಯ ದಿವಸದಲ್ಲಿಯೇ ಸಭೆಯು ಸ್ಥಾಪನೆಗೊಂಡಿತು (ಯಾಜಕಕಾಂಡ 23:16; ಅಪೊಸ್ತಲರ ಕೃತ್ಯಗಳು 2:1). [10]ಫಸ್ಟ್ ಅಪಾಲಜಿ 67:7 ಜಸ್ಟಿನ್ ಮಾರ್ಟಿರ್ ಕ್ರಿ.ಶ 100ರಲ್ಲಿ ಹುಟ್ಟಿದನು, ಅವನು ಪ್ರಮುಖನು ಎಂದು ಬರಹಗಾರರು ಹೇಳಿ ರುವರು, ಅವನು ಪೋಲೋಕಾರ್ಪನ್ ಶಿಷ್ಯನು, ಅವನು ಅಪೊಸ್ತಲರ ಯೋಹಾನನ ಶಿಷ್ಯನು, ಅವನ ಹೇಳಿಕೆಗಳನ್ನು, ಇತರೆ ಪುರಾತನ ಬರವಣಿಗೆಗಳು ಉತ್ತೇಜಿಸಿವೆ, ಬಾರ್ನಬಸ್ 15:9 ಹೊಸ ಭವರಸೆಗೆ ಬಂದವರ ಕುರಿತು ಇಗ್ನೆಷಿಯನು ಮಾತನಾಡಿರುವನು, ಅವನು ಸಬ್ಬತ್ತನ್ನು ಆಚರಿಸುತ್ತಿರಲಿಲ್ಲ, ಆದರೆ ಕರ್ತನ ದಿನಕ್ಕಾಗಿ ಜೀವಿಸುತ್ತಿದ್ದನು (ಮ್ಯಾಗ್‌ನೇಸಿಯಾ ಪತ್ರ 9:1-3). ಫ್ರಂ ದ ಕಾನ್ಸ್ಟಿಟ್ಯೂಷನ್ ಆಫ್ ಹೋಲಿ ಅಪೋಸ್ತಲ್.

[11]ಕ್ರೈಸ್ತರು ಏಳನೆಯ ದಿನವನ್ನು ಆಚರಿಸಬೇಕೆಂದು ಅಪ್ಪಣೆ ಇರುವದಿಲ್ಲ (ದಿ ಸಬ್ಬತ್) (ಕೊಲೊಸ್ಸೆ 2:14, 16). [12]ಪೌಲನು ಮಧ್ಯರಾತ್ರಿಯವರೆಗೂ ಮಾತನಾಡಿದನು (ವಚನ 7) ಅಂದರೆ ಅದು ರಾತ್ರಿಯ ಕೂಟ ಎಂಬ ಸೂಚನೆ. [13]ಕೆಲವರು ಗುಲಾಮರಾಗಿದ್ದರು (1 ಕೊರಿಂಥ 12:13; ಎಫೆಸ 6:5; ಕೊಲೊಸ್ಸೆ 3:22; 1 ತಿಮೊಥೆ 6:1). [14]ಅನುವಾದಕರು ಅದು ಶನಿವಾರ ರಾತ್ರಿ ಎಂದು ತಿಳಿದರು ಅಪೊಸ್ತಲರ ಕೃತ್ಯಗಳು 20:7 ಇತರೆಡೆ ಗ್ರೀಕ್ ವ್ಯಾಖ್ಯಾನವಿದೆ (ಮತ್ತಾಯ 28:1; ಮಾರ್ಕ 16:2, 9; ಲೂಕ 24:1; ಯೋಹಾನ 20:1, 19; 1 ಕೊರಿಂಥ 16:2), ಭಾನುವಾರ ಎಂದು ಅನುವಾದಿಸಿದೆ. [15]Foster, 1685. [16]ವಾಖ್ಯಾನವು "ಏಳನೇ ದಿನ ಪ್ರಚಾರಕರನ್ನು ಅನುಮೋದಿಸುವದಿಲ್ಲ." ಅವರು ಶುಕ್ರವಾರ ಮುಸ್ಸಂಜೆಯಿಂದ ಶನಿವಾರದ ಮುಸ್ಸಂಜೆಯವರೆಗೆ ಸಬ್ಬತ್ ಆರಾಧನೆಯ ದಿನ ಎಂದು ಕರೆ ಯುತ್ತಿದ್ದರು, ಅದು ಯೆಹೂದ್ಯ ಸಬ್ಬತ್ತಿನ ಭಾಗವಾಗಿರುವದಿಲ್ಲ. (I. Howard Marshall, *The Acts of the Apostles,* The Tyndale New Testament Commentaries, gen. ed. R. V. G. Tasker [Grand Rapids, Mich.: Wm. B. Eerdmans Publishing Co., 1980], 326.) [17]ಅವರು ಒಟ್ಟಾಗಿ ರೊಟ್ಟಿ ಮುರಿಯುವದಕ್ಕೆ ಬಂದರೇ ವಿನ, ಪೌಲನ ಪ್ರಸಂಗ ಕೇಳಲು ಬರಲಿಲ್ಲ, ಪ್ರಸಿದ್ಧಿಗೊಂಡ ಪೌಲನು ಎರಡನೆಯ ಸ್ಥಾನ ತೆಗೆದುಕೊಂಡನು. [18]ಪೋಸ್ಟರ್, 1685 ಅಪೊಸ್ತಲರ ಕೃತ್ಯಗಳು 20:7ರ ವಿಚಾರವು ಕರ್ತನ ಭೋಜನವೆಂದು ಕೆಲವರ ಅಭಿಪ್ರಾಯ (ಯೂದ 12; ಸಾಮಾನ್ಯ ಭೋಜನ ರೂಢಿಯಲ್ಲಿತ್ತು) ಬಹುಶಃ ಕೊರಿಂಥದ್ದೂ ಇದೇ ವಿಧವಿರಬಹುದು (1 ಕೊರಿಂಥ 11:17-22, 33, 34). 20:7 ಕರ್ತನ ಭೋಜನವೆಂದು ಒಪ್ಪಿಕೊಂಡಿರುವರು. ತ್ರೋವದವರು ಈ ಎರಡನ್ನೂ ಮಾಡಿದರು ಎಂಬ ಸೂಚನೆ ಇರದಿದ್ದರೂ, ಪೌಲನು ಅದನ್ನು ಮಾಡಬಾರದು ಎಂದು ಹೇಳಲಿಲ್ಲ. [19]ವಾರದ ಮೊದಲನೆಯ ದಿನವನ್ನು ಹೊರತುಪಡಿಸಿ, ಬೇರೆ ದಿನಗಳಲ್ಲಿ ಆದಿ ಕ್ರೈಸ್ತರು ಕರ್ತನ ಭೋಜನವನ್ನು ಮಾಡಲಿಲ್ಲ. [20]Didache 14:1, quoted by Allen, 140.

[21]*Apology* I, 67:7, quoted by Allen, 141. [22]J. W. McGarvey, *New Commentary on Acts of Apostles,* vol. 2 (Delight, Ark.: Gospel Light Publishing Co., n.d.), 179. [23]McCord's ಉಪನ್ಯಾಸ, ಪ್ರಸಂಗದ ಒಂದೇ ಕ್ರಮವಲ್ಲ. [24]ತ್ರೋವವು ರೋಮಾಯದ ಆಡಳಿತಕ್ಕೆ ಒಳಪಟ್ಟಿತ್ತು. [25]2 ಮತ್ತು 3ನೇಯ ಶತಮಾನದವರೆಗೆ, ಸಭಾ ಕಟ್ಟಡಗಳು ಇಲ್ಲದೆ ಇದದ್ದರಿಂದ, ಅದನ್ನು ಹೊಂದುವದು ತಪ್ಪು ಎಂಬುದು ಕೆಲವರ ಅಭಿಪ್ರಾಯ ವಿವಿಧ ಕಟ್ಟಡದಲ್ಲಿ ಸೇರಿಬಂದರು ಎಂದು ನಮ್ಮ ಪಾಠದಲ್ಲಿ ತಿಳಿಸಿದ್ದೇವೆ; "ಕ್ರಮಬದ್ಧವಾದ ಮಾದರಿ" ಇರುವದಿಲ್ಲ ಒಂದು ಸ್ಥಳವನ್ನು ನಿಗದಿ (ಇಬ್ರಿಯ 10:25) ಪಡಿಸಬೇಕೆಂಬ ಆ ದೇಶವಿದೆ, ಅದನ್ನು ನಿರ್ದಿಷ್ಟವಾಗಿ ಉದ್ದೇಶಗಳನ್ನು ಈಡೇರಿಸುವದಕ್ಕಾಗಿ, ಸಭೆಯು ಸೇರಿಬರುವ ಸ್ಥಳವನ್ನು ನಿರ್ಧರಿಸಬೇಕು. [26]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ 2:42, 46 ರ ಟಿಪ್ಪಣಿ ನೋಡಿರಿ. [27]F. F. Bruce, *The Book of Acts,* rev. ed. (Grand Rapids, Mich.: Wm. B. Eerdmans Publishing Co., 1988), 384. [28]ಸ್ಥಳೀಯ ವಾಡಿಕೆಯಂತೆ, "ಸ್ನೇಹದ ಮಾತು" ಎಂಬುದನ್ನು ಸೇರಿಸಬಹುದು. [29]ಕೊರಿಂಥದವರು, ಕರ್ತನ ಭೋಜನದ ಬದಲು ಕುಡಿದು ತಿಂದದ್ದರಿಂದ (1 ಕೊರಿಂಥ 11) ಪೌಲನು ಅದನ್ನು ಖಂಡಿಸದೆ, ಅದರ ವಿಷಯದ ಕುರಿತು ಗದರಿಸಿದನು.